**ಓ.ಎಸ್. ನಂ. 42/2019** **ಡಿ.ಡಬ್ಲ್ಯೂ- 1**

**<u>ಸಾಕ್ಷಿಯನ್ನು ದಿನಾಂಕ 8.11.2023 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

<u>ಪಾಟೀ ಸವಾಲುಃ ವಾದಿ ಪರ ಶ್ರೀ ಬಿ.ಎಲ್.ಟಿ ವಕೀಲರಿಂದಃ</u>

ಚನ್ನೇಗೌಡ ಮತ್ತು ನಿಂಗಮ್ಮ ನನ್ನ ತಂದೆ ತಾಯಿ ಎಂದರೆ ಸರಿ. ಅವರಿಗೆ 6 ಗಂಡು ಮಕ್ಕಳು ಹಾಗೂ 4 ಹೆಣ್ಣು ಮಕ್ಕಳು ಇರುತ್ತಾರೆ. ಗಂಡು ಮಕ್ಕಳ ಹೆಸರು ಕಲ್ಯಾಣೇಗೌಡ, ಹೊನ್ನೇಗೌಡ, ಚಲುವರಾಜು, ಚಂದ್ರಶೇಖರ, ಶಿವರಾಜು ಹಾಗೂ ರಾಮಚಂದ್ರ ಆಗಿರುತ್ತದೆ. ಹೆಣ್ಣು ಮಕ್ಕಳ ಹೆಸರು ಚನ್ನಮ್ಮ ಉಃ ಮಾಲಮ್ಮ, ದೊಡ್ಡಸಿಂಗಮ್ಮ, ಶಿವಮ್ಮ ಉಃಸಿದ್ದಮ್ಮ ಮತ್ತು ಕಮಲಮ್ಮ ಉಃಚಿಕ್ಕಸಿಂಗಮ್ಮ ಆಗಿರುತ್ತದೆ. ಮೇಲೆ ಹೇಳಿದ ಹೊನ್ನೇಗೌಡ ತೀರಿಕೊಂಡಿದ್ದು ಅವರಿಗೆ 11 ನೇ ಪ್ರತಿವಾದಿ ಹೆಂಡತಿ ಮತ್ತು 12 ನೇ ಪ್ರತಿವಾದಿ ಒಬ್ಬನೇ ಮಗ ಇರುತ್ತಾರೆ. ರಾಮಚಂದ್ರ ಅವರು ತೀರಿಕೊಂಡಿದ್ದು, 4 ರಿಂದ 6 ನೇ ಪ್ರತಿವಾದಿಯರು ಅವರ ವಾರಸುದಾರರು ಆಗಿರುತ್ತಾರೆ. ದಾವ 1 ನೇ ಐಟಂ ಆಸ್ತಿಯು ನನ್ನ ತಂದೆಯ ಹೆಸರಿನಲ್ಲಿತ್ತು. ನನ್ನ ತಂದೆ ತಾಯಿ ದಿನಾಂಕ 27.7.2006 ರಂದು ಒಂದೇ ದಿನ ತೀರಿಕೊಂಡಿರುತ್ತಾರೆ. ಅವರು ಹೇಗೆ ತೀರಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನಾನು ಹತ್ತನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ತಂದೆ ತಾಯಿ ಬದುಕಿದ್ದಾಗ ಕುಟುಂಬದ ಎಲ್ಲಾ ವ್ಯವಹಾರವನ್ನು ನಾನೇ ನೋಡಿಕೊಳ್ಳುತ್ತಿದ್ದೆ ಎಂದರೆ ಸರಿಯಲ್ಲ. ನಾನು ವಿದ್ಯಾಭ್ಯಾಸ ಮಾಡಿರುವುದರಿಂದ ದಾವಆಸ್ತಿಗಳ ವ್ಯವಹಾರವನ್ನು ನನ್ನ ತಂದೆ ನನಗೆ ವಹಿಸಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ 4 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದರು. ನನ್ನ ತಂದೆ ಓದುತ್ತಿದ್ದರಿಂದ ಹಾಗೂ ಬರೆಯುತ್ತಿದ್ದರಿಂದ ಅವರು 4 ನೇ ತರಗತಿ ವಿದ್ಯಾಭ್ಯಾಸ ಮಾಡಿರುತ್ತಾರೆ ಎಂದು ಹೇಳುತ್ತಿದ್ದೇನೆ. ನನ್ನ ತಂದೆ 4 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುವುದಿಲ್ಲ, ಸದರಿ ವಿಚಾರ ನನಗೆ ಗೊತ್ತಿದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸಾಕ್ಷಿದಾರರು ಓದಿರುವ ಶಾಲಾ ದಾಖಲಾತಿಗಳು ಸಿಕ್ಕಿದರೆ ಹಾಜರುಪಡಿಸುತ್ತೇನೆ ಎನ್ನುವರು. ನನ್ನ ತಾಯಿ ವಿದ್ಯಾಭ್ಯಾಸ ಮಾಡಿರುವುದಿಲ್ಲ. ನನ್ನ ಸಹೋದರನಾದ ವಾದಿಯು 7 ನೇ ತರಗತಿವರೆಗೆ ಓದಿರುತ್ತಾನೆ. ಉಳಿದ ಸಹೋದರರು ಅಂದಾಜು 3 ರಿಂದ 4 ತರಗತಿವರೆಗೆ ಓದಿರುತ್ತಾರೆ. ನನ್ನ ತಂದೆ ತಾಯಿಯರು ದಾವಆಸ್ತಿಯ ವ್ಯವಹಾರವನ್ನು ನನಗೆ ನೀಡಿದ್ದು ನಾನು ಆಸ್ತಿಗಳ ವ್ಯವಹಾರವನ್ನು ಸರಿಯಾಗಿ ನೋಡದೇ ಇದ್ದುದರಿಂದ ನನ್ನ ತಂದೆ ತಾಯಿ ಮನನೊಂದು ಆತ್ಮಹತ್ಯೆ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿದಾರರು ಆತ್ಮಹತ್ಯೆ ಮಾಡಿಕೊಂಡಿರುತ್ತಾರೆ, ನನ್ನಿಂದ ಆತ್ಯಹತ್ಯೆ ಮಾಡಿಕೊಂಡಿರುವ ಬಗ್ಗೆ ಪುರಾವೆ ಇಲ್ಲ ಎನ್ನುವರು.

ದಾವ 1 ನೇಐಟಂ ಆಸ್ತಿಯು 2 ಎಕರೆ ಇದ್ದು ಅದರ ಪಹಣಿ ಈಗ 7 ನೇ ಪ್ರತಿವಾದಿಯ ಹೆಸರಿನಲ್ಲಿರುತ್ತದೆ. 1982-83 ರಲ್ಲಿ ಆಗಿರುವ ಪಾಲು ಪಾರಿಕತ್ತು ಆಧಾರದ ಮೇರೆಗೆ ದಾವ 1 ನೇ ಐಟಂ

ಆಸ್ತಿಯ ಪೈಕಿ 7 ನೇ ಪ್ರತಿವಾದಿಗೆ 1-20 ಎಕರೆ ಮತ್ತು ನನ್ನ ಸಹೋದರ ರಾಮಚಂದ್ರರವರಿಗೆ 20 ಗುಂಟೆ ಆಸ್ತಿ ಬಂದಿರುತ್ತದೆ. ಆ ರೀತಿ ಪಾಲು ಆಗಿರುವ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಾವ 1 ನೇ ಐಟಂ ಆಸ್ತಿಯ ಪಹಣಿಯಲ್ಲಿ ಪಾಲುಪಾರಿಕತ್ತು ಮೇರೆಗೆ 7 ನೇ ಪ್ರತಿವಾದಿ ಹಾಗೂ ರಾಮಚಂದ್ರ ರವರ ಹೆಸರಿಗೆ ಮ್ಯುಟೇಶನ್ ಆಗಿರುವುದಿಲ್ಲ. ಹೇಳಿಕೆಯ ಮೇರೆಗೆ ಅವರು ಖಾತೆ ಮಾಡಿಸಿಕೊಂಡಿದ್ದು ಯಾವುದೇ ವಿಭಾಗವಾಗಿರುವುದಿಲ್ಲ ಎಂದರೆ ಸರಿಯಲ್ಲ.

ದಾವ 2 ನೇಐಟಂ ಆಸ್ತಿಯು ನನ್ನ ತಂದೆಯ ಹೆಸರಿನಲ್ಲಿತ್ತು. ಸದರಿ ಆಸ್ತಿಯ ಪಹಣಿಯು ನನ್ನನ್ನು ಸೇರಿಸಿ ನನ್ನ ಸಹೋದರರಾದ ಚಲುವರಾಜು, ಶಿವಕುಮಾರ್, ಶಿವರಾಜು ಮತ್ತು ರಾಮಚಂದ್ರರವರ ಹೆಸರಿನಲ್ಲಿರುತ್ತದೆ. ಯಾವ ಆಧಾರದ ಮೇರೆಗೆ ಖಾತೆಯಾಗಿರುತ್ತದೆ ಎಂದರೆ ಸಾಕ್ಷಿದಾರರು ಎ.ಸಿ ರವರ ಆದೇಶದ ಮೇರೆಗೆ 2003-04 ರಲ್ಲಿ ಆಗಿರುತ್ತದೆ ಎನ್ನುವರು. ಎ.ಸಿ ರವರ ಆದೇಶದ ಮೇರೆಗೆ ಖಾತೆಯಾಗಿರುವುದು ಸುಳ್ಳು ಎಂದರೆ ಸರಿಯಲ್ಲ. ಎ.ಸಿ ನ್ಯಾಯಾಲಯದ ಮುಂದೆ ವಾದಿಯು ಹಾಜರಾಗಿರುವುದಿಲ್ಲ. ಈ ದಾವೆಯನ್ನು ದಾಖಲಿಸಿದ ನಂತರ ವಿಭಾಗ ಮಾಡಿಕೊಂಡಿರುತ್ತೇವೆ ಹಾಗೂ ಎ.ಸಿ ರವರಿಂದ ಅದೇಶವಾಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಿಭಾಗವಾಗಿರುವ ಬಗ್ಗೆ ಮತ್ತು ಎ.ಸಿ ನ್ಯಾಯಾಲಯದಲ್ಲಿ ಆದೇಶವಾಗಿರುವ ಬಗ್ಗೆ ನನ್ನ ಲಿಖಿತ ಹೇಳಿಕೆಯಲ್ಲಿ ತಿಳಿಸಿರುತ್ತೇನೆ.

ದಾವ 3 ನೇ ಐಟಂ ಆಸ್ತಿಯ ವಿಸ್ತೀರ್ಣ 3 ಎಕರೆ ಇರುತ್ತದೆ. ಸದರಿ ಆಸ್ತಿಯು ನನ್ನ ತಾಯಿಗೆ ಅವರ ಅಣ್ಣನಿಂದ ದಾನ ಮೂಲಕ ಬಂದಿರುತ್ತದೆ. ಆ ರೀತಿ ದಾನದ ಮೂಲಕ ಬಂದಿರುವ ಬಗ್ಗೆ ಎಂ.ಆರ್ ಹೊರತುಪಡಿಸಿ ಬೇರೆ ದಾಖಲಾತಿ ಇರುವುದಿಲ್ಲ. ಸದರಿ ಆಸ್ತಿಯ ಪಹಣಿಯು ಈಗ ನನ್ನ ತಾಯಿ ಹೆಸರಿನಲ್ಲಿದ್ದು, ಅವರು ಬದುಕಿದ್ದಾಗ ಸದರಿ ಆಸ್ತಿಯ ಪೈಕಿ 11 ಗುಂಟೆ ಅಸ್ತಿಯನ್ನು ಮಾರಾಟ ಮಾಡಿರುತ್ತಾರೆ. ದಾವ 4 ನೇ ಐಟಂ ಆಸ್ತಿಯು ನನ್ನ ತಾಯಿ ಹೆಸರಿನಲ್ಲಿರುತ್ತದೆ. ಸದರಿ ಆಸ್ತಿಯನ್ನು ನನ್ನ ತಾಯಿ 1983-84 ರಲ್ಲಿ ಕ್ರಯಕ್ಕೆ ಪಡೆದಿರುತ್ತಾರೆ. ದಾವ 3 ಮತ್ತು 4 ನೇ ಐಟಂ ಆಸ್ತಿಯನ್ನು ನನ್ನ ತಾಯಿ ಯಾವುದೇ ನೋಂದಾಯಿತ ದಾಖಲಾತಿ ಮೂಲಕ ಹಂಚಿರುವುದಿಲ್ಲ.

ದಾವ 5 ನೇ ಐಟಂ ಆಸ್ತಿಯ ಖಾತೆಯು 10 ನೇ ಪ್ರತಿವಾದಿ ಹೆಸರಿನಲ್ಲಿದ್ದು, 1982 ರ ವಿಭಾಗದ ಪ್ರಕಾರ ಅವರ ಹೆಸರಿಗೆ ಆಗಿರುತ್ತದೆ. ವಿಭಾಗ ಪತ್ರವಾಗಿರುವ ದಾಖಲಾತಿ ಇರುತ್ತದೆ. ನನ್ನ ತಾಯಿ 10 ನೇ ಪ್ರತಿವಾದಿ ಹೆಸರಿಗೆ ದಾವ 5 ನೇ ಐಟಂ ಆಸ್ತಿಗೆ ಸಂಬಂಧಿಸಿದಂತೆ ಯಾವುದೇ ನೋಂದಾಯಿತ ದಾಖಲಾತಿ ಬರೆದುಕೊಟ್ಟಿರುವುದಿಲ್ಲ. ನಿಪಿ11 ನ್ನು ನಾವೇ ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ದಾವ 6 ನೇ

ಐಟಂ ಆಸ್ತಿಯು ನನ್ನ ತಂದೆಯ ಹೆಸರಿನಲ್ಲಿರುತ್ತದೆ.  ಸದರಿ ಆಸ್ತಿಗೆ ಸಂಬಂಧಿಸಿದಂತೆ ಎ.ಸಿ ನ್ಯಾಯಾಲಯದಲ್ಲಿ ಕೇಸು ನಡೆದಿರುತ್ತದೆ ಎಂದರೆ ಸರಿ.  ಸದರಿ ಆಸ್ತಿಯ ಖಾತೆಯನ್ನು ನನ್ನ ತಂದೆಯ ಹೆಸರಿಗೆ ಮಾಡಲು ಆದೇಶವಾಗಿರುತ್ತದೆ ಎಂದರೆ ಸರಿ.  ಸದರಿ ಎ.ಸಿ ನ್ಯಾಯಾಲಯದ ಕೇಸಿಗೆ ನಾನು ಹಾಜರಾಗುತ್ತಿದ್ದೆ ಎಂದರೆ ಸರಿ. ಸರ್ವೆ ನಂ.8 ರಲ್ಲಿ ನನಗೆ 1 ಎಕರೆ ಮತ್ತು ನನ್ನ ಸಹೋದರ ಚಲುವರಾಜುಗೆ 1 ಎಕರೆ ದರಕಾಸ್ತಿನಲ್ಲಿ ಮಂಜೂರಾಗಿರುತ್ತದೆ.  ಸದರಿ 2 ಎಕರೆ ಆಸ್ತಿಯನ್ನು ನನ್ನ ತಂದೆ ಬದುಕಿದ್ದಾಗ ಬಗರ್ ಹಕುಂ ಸಾಗುವಳಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ಬದುಕಿದ್ದಾಗ ನನ್ನ ಹಾಗೂ ಚಲುವರಾಜುರವರ ಹೆಸರಿಗೆ ತಲಾ 1 ಎಕರೆ ಮಂಜೂರು ಮಾಡಬಹುದು ಎಂದು ಹೇಳಿಕೆ ನೀಡಿರುತ್ತಾರೆ ಎಂದರೆ ಸರಿಯಲ್ಲ.  ಈಗ ನೋಡುತ್ತಿರುವ ದಾಖಲೆಯು ನನ್ನ ಅಣ್ಣ ಚಲುವರಾಜು ರವರು ಆಸ್ತಿ ಮಂಜೂರು ಮಾಡಲು ನೀಡಿರುವ ಫಾರಂ ನಂ.50 ಎಂದರೆ ಸರಿ.  ಸಾಕ್ಷಿದಾರರು ಸದರಿ ದಾಖಲೆಯನ್ನು ನೋಡಿ ಒಪ್ಪಿದ್ದರಿಂದ ಅದನ್ನು ನಿಪಿ47 ಎಂದು ಗುರುತಿಸಲಾಯಿತು.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.